## ನಿಮ್ಮೊಡನೆ

# ಶಿಕ್ಷಕರಿಲ್ಲದೆ ಶಿಕ್ಷಣ ವ್ಯವಸ್ಥೆ ಸದೃಢವೆ?

**ಮಕ್ಕಳು ಮಾದಕದ್ರವ್ಯ ವ್ಯಸನಿಗಳಾದರೆ, ಒತ್ತಡ ನಿರ್ವಹಿಸಲಾಗದಿದ್ದರೆ, ತಮ್ಮನ್ನು ತಾವೇ ಕೊಂದುಕೊಂಡರೆ ಸಾಮಾನ್ಯವಾಗಿ ನಾವೆಲ್ಲರೂ ಶಿಕ್ಷಣ ವ್ಯವಸ್ಥೆಯನ್ನು ದೂರುತ್ತೇವೆ. ಅಂಕ ಗಳಿಸುವ ಯಂತ್ರಗಳಾಗಿಸುತ್ತಿದೆ ನಮ್ಮ ವ್ಯವಸ್ಥೆ ಎಂದು ದೂಷಿಸುತ್ತೇವೆ. ಆದರೆ ಶಿಕ್ಷಣ ವ್ಯವಸ್ಥೆಯ ಅಡಿಪಾಯ ಅಭದ್ರವಾಗಿರುವುದನ್ನು ಯಾಕೆ ಅಲಕ್ಷ್ಯ ಮಾಡುತ್ತೇವೆ?**


ವಿಜಯ

ನಮ್ಮ ರಾಜ್ಯದಲ್ಲಿ ಸುಮಾರು ಏಳು ಸಾವಿರದ ಮುನ್ನೂರು ಏಕೋಪಾಧ್ಯಾಯ ಶಾಲೆಗಳಿವೆ. ಕೆಲ ಶಾಲೆಗಳಲ್ಲಿ ಕೇವಲ 5–8 ಮಕ್ಕಳು ಹಾಜರಾಗ್ತಾರೆ.

ರಾಜ್ಯದಲ್ಲಿ ಶಿಕ್ಷಕರ ಕೊರತೆಯಿಂದ ಹೀಗಾಗಿದೆ ಅಂತಲ್ಲ, 60 ಸಾವಿರ ಶಿಕ್ಷಕರ ಕೊರತೆ ಇದೆ. ಇಷ್ಟು ಹುದ್ದೆಗಳೂ ಖಾಲಿ ಇವೆ. ಸದ್ಯ 13000 ಶಿಕ್ಷಕರ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ.

ಶಿಕ್ಷಕ ಹುದ್ದೆಗೆ ಅರ್ಹರಿರುವ ಅಭ್ಯರ್ಥಿಗಳಿಗೆ ಕೆಲವೊಮ್ಮೆ ಇದು ಕೊನೆಯ ಅವಕಾಶವೇ ಆಗಿರುತ್ತದೆ. 60 ಸಾವಿರ ಶಿಕ್ಷಕರ ಅಗತ್ಯ ಇರುವಾಗ ಹದಿಮೂರು ಸಾವಿರ ಶಿಕ್ಷಕರ ನೇಮಕಾತಿಯಿಂದ ಎಂಥ ಬದಲಾವಣೆ ಅಥವಾ ಸುಧಾರಣೆ ಸಾಧ್ಯ?

ಈಗಾಗಲೇ ಏಳನೆ ತರಗತಿಯ ಮಗುವಿಗೆ ಎರಡನೆ ತರಗತಿಯ ಪಠ್ಯಕ್ರಮವೂ ಓದಲಾಗುತ್ತಿಲ್ಲ ಎಂದೂ ಒಂದು ಸಮೀಕ್ಷೆ ಹೇಳಿದೆ. ಕಲಿಕಾ ಗುಣಮಟ್ಟ ಕುಸಿದು ಹೋಗಿದೆ. ಕಾಲೇಜಿಗೆ ಬಂದ ಮೇಲೆ ಅಕ್ಷರಾಭ್ಯಾಸ ಮಾಡಿಸಲಾಗದು ಎಂಬುದು ಕಾಲೇಜುಗಳ ದೂರು. ಇಲ್ಲಿ ವಿಷಯ ಪರಿಣತರಾಗಿಸಬಹುದು. ಅಕ್ಷರಸ್ಥರಾಗಿಸಲು ಯತ್ನಿಸಲಾಗದು ಎಂಬುದು ಅವರ ಸ್ಪಷ್ಟ ನುಡಿ. ಅದು ಸಹಜವೂ ಹೌದು.

ದೇಶದಲ್ಲಿ ಒಟ್ಟು ಒಂದು ಲಕ್ಷ ಏಕೋಪಾಧ್ಯಾಯ ಶಾಲೆಗಳಿವೆ. ಕರ್ನಾಟಕವು ಈ ಸಾಲಿನಲ್ಲಿ ಐದನೆಯ ಸ್ಥಾನ ಪಡೆದಿದೆ. ಕಳೆದೆರಡು ವರ್ಷಗಳಿಗೆ ಹೋಲಿಸಿದರೆ ಈ ಸಂಖ್ಯೆಯಲ್ಲಿ ಇಳಿಕೆ ಕಂಡು ಬಂದಿದೆಯೆಂದು ಅಧ್ಯಯನ ಹೇಳುತ್ತಿದೆ.

ಇಳಿಕೆ ಕಂಡು ಬಂದಿರುವುದು ಏಕೋಪಾಧ್ಯಾಯ ಶಾಲೆಗೆ ಹೆಚ್ಚುವರಿ ಶಿಕ್ಷಕರ ನೇಮಕವಾಗಿ ಕಡಿಮೆಯಾಗಿದೆಯೇ ಅಥವಾ ಅಂಥ ಶಾಲೆಗಳನ್ನು ಮುಚ್ಚಿ, ಇನ್ನೊಂದು ಶಾಲೆಗೆ ವಿಲೀನ ಮಾಡಿರುವುದರಿಂದಲೇ ಎಂಬ ಸ್ಪಷ್ಟ ವಿವರಗಳು ಅಲ್ಲಿಲ್ಲ.

ಸದ್ಯ ಪಬ್ಲಿಕ್ ಸ್ಕೂಲುಗಳನ್ನು ಆರಂಭಿಸುವುದಾಗಿಯೂ ರಾಜ್ಯ ಸರ್ಕಾರ ಹೇಳಿದೆ. ಇಲ್ಲಿಯೂ 50ಕ್ಕಿಂತ ಕಡಿಮೆ ಮಕ್ಕಳಿರುವ ಪಬ್ಲಿಕ್ ಶಾಲೆಯ ಒಂದೂವರೆಯಿಂದ ಐದು ಕಿ.ಮೀ. ವ್ಯಾಪ್ತಿಯೊಳಗಿನ ಶಾಲೆಗಳನ್ನು ವಿಲೀನ ಮಾಡುವುದಾಗಿ ಹೇಳಿದೆ. ಹೆಣ್ಣುಮಕ್ಕಳಿಗೆ ಶಾಲೆಗೆ ಕಳುಹಿಸುವುದೇ ದುಸ್ತರ ಎನಿಸುವ ಗ್ರಾಮೀಣ ಪ್ರದೇಶಗಳಲ್ಲಿ ಈ ವಿಲೀನ ಕ್ರಿಯೆಯಿಂದ ಕಷ್ಟವಾಗಲಿದೆ. ಮನೆಗೆ ಸಮೀಪವೆಂದೇ ಶಾಲೆಗೆ ಕಳುಹಿಸುವವರು ದೂರವಾಯಿತೆಂಬ ನೆಪ ಹೇಳಿ, ಮನೆಯಲ್ಲಿಯೇ ಉಳಿಸಿಕೊಳ್ಳುವರು.

ಶಾಲಾ ಶಿಕ್ಷಣ ಸುಭದ್ರಗೊಳಿಸಲು ಮೊದಲು ಆದ್ಯತೆಯ ಮೇರೆಗೆ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲಿ. ಮಾತೃಭಾಷೆಯಲ್ಲಿ ಶಿಕ್ಷಣ ನೀಡುವ ಕುರಿತು ಮೊದಲ ಆದ್ಯತೆ ನೀಡಲಿ. ಇರುವ ಶಾಲೆಗಳಿಗೆ ಸುಸಜ್ಜಿತ ಕಟ್ಟಡ, ಶಿಕ್ಷಕರು, ಶಿಕ್ಷಕರಿಗೆ ಸೌಲಭ್ಯಗಳು ಮುಂತಾದವನ್ನೆಲ್ಲ ನೀಡಿ, ಪ್ರಾಥಮಿಕ ಶಿಕ್ಷಣವನ್ನು ಸುಭದ್ರಗೊಳಿಸಲಿ. ಇಲ್ಲದೇ ಇದ್ದಲ್ಲಿ ಉಳಿದೆಲ್ಲ ಮಹತ್ವಾಕಾಂಕ್ಷೆಯ ಯೋಜನೆಗಳು ಕೆಲವೇ ಕೆಲವು ಜನರ ಆಕಾಂಕ್ಷೆಗಳನ್ನು ಈಡೇರಿಸಲು ಎಂಬಂತೆ ಆಗುತ್ತದೆ.

ಪಬ್ಲಿಕ್ ಸ್ಕೂಲುಗಳಲ್ಲಿ ಕೌಶಲಗಳಿಗೆ ಹೆಚ್ಚಿನ ಮಹತ್ವ ನೀಡುವುದಾಗಿಯೂ, ಕಂಪನಿಗಳೊಂದಿಗೆ ಸಹಭಾಗಿತ್ವದಲ್ಲಿ ಉದ್ಯೋಗಾರ್ಹತೆ ನೀಡುವುದಾಗಿಯೂ ಸರ್ಕಾರ ಹೇಳುತ್ತಿದೆ. ಇದೆಲ್ಲದರ ದೂರಗಾಮಿ ಪರಿಣಾಮವನ್ನು ಸರ್ಕಾರ ಯೋಚಿಸದಷ್ಟು ಮಂದಬುದ್ಧಿಯದ್ದಾಗಿದೆಯೇ? ಹದಿಹರೆಯದಲ್ಲಿ ಉದ್ಯೋಗಾರ್ಹತೆ ನೀಡಿ, ಕಾರ್ಮಿಕವರ್ಗವನ್ನೇ ಸೃಷ್ಟಿಸುವ ಕೆಲಸಕ್ಕೆ ಕೈಹಾಕುವಂತಿದೆ.

ಇದನ್ನೆಲ್ಲ ಬದಿಗಿರಿಸಿ, ತಮ್ಮನ್ನೇ ತಾವು ಸಮರ್ಪಿಸಿಕೊಳ್ಳಲು ಸಿದ್ಧರಾಗಿರುವ ಶಿಕ್ಷಕ ವರ್ಗಕ್ಕೆ ಒಳ್ಳೆಯ ಸಂಬಳ ಕೊಟ್ಟು, ಕೆಲಸ ನೀಡಲಿ. ಶಾಲೆಗಳನ್ನು ಸುಭದ್ರಗೊಳಿಸಲಿ. ಇಲ್ಲದಿದ್ದಲ್ಲಿ ಮಹತ್ವಾಕಾಂಕ್ಷೆ ಇಲ್ಲದ, ಕನಸುಗಳಿಲ್ಲದ, ದುಡಿವ ವರ್ಗವನ್ನೇ ಸೃಷ್ಟಿಸಿ, ಉಳ್ಳವರ ಮತ್ತು ಇಲ್ಲದವರ ನಡುವಿನ ಕಂದರವನ್ನು ಕಾಯಂ ಆಗಿಸಿದಂತಾಗುತ್ತದೆ.

ಇನ್ನೊಂದು ಶೈಕ್ಷಣಿಕ ವರ್ಷ ಆರಂಭವಾಗುವುದರಲ್ಲಿ ಶಿಕ್ಷಕರ ನೇಮಕಾತಿ ಆಗಬೇಕು. ಪಬ್ಲಿಕ್ ಸ್ಕೂಲುಗಳನ್ನು ಆರಂಭಿಸುವಂತೆಯೇ, ಕನ್ನಡದ ಶಾಲೆಗಳನ್ನು ಸದೃಢಗೊಳಿಸಲಿ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ಕೊಡುವಂತಾಗಲಿ. ವೃತ್ತಿಶಿಕ್ಷಣದ ಜೊತೆಗೆ ಉನ್ನತ ಶಿಕ್ಷಣದ ಬಾಗಿಲುಗಳೂ ತೆರೆಯುವಂತಾಗಲಿ. ಈ ಹಿಂದೆಯೂ ಕನ್ನಡ ಮತ್ತು ಸರಕಾರಿ ಶಾಲೆಗಳಲ್ಲಿ ಓದಿದವರು ಉನ್ನತ ಹುದ್ದೆಗೇರಿರುವ ಹಲವಾರು ಉದಾಹರಣೆಗಳು ನಮ್ಮೆದುರಿಗೆ ಇವೆ. ಸಮರ್ಪಣಾ ಭಾವವಿರುವ ಶಿಕ್ಷಕರಿಗೆ ಹುದ್ದೆ ಸಿಕ್ಕಲ್ಲಿ ಮತ್ತೆ ಇತಿಹಾಸ ಮರುಕಳಿಸುವುದು.

ಸದ್ಯ ಇರುವ ಶಾಲಾ ಕಾಲೇಜುಗಳಿಗೆ ಮೂಲ ಸೌಲಭ್ಯಗಳನ್ನು ಒದಗಿಸಲಿ. ಸುಸಜ್ಜಿತ ಕಟ್ಟಡ, ಶೌಚಾಲಯ, ಗ್ರಂಥಾಲಯ, ಲ್ಯಾಬ್‌ಗಳು, ಹೆಣ್ಣುಮಕ್ಕಳಿಗೆ ವಿಶ್ರಾಂತಿ ಕೋಣೆಗಳನ್ನು ಒದಗಿಸಲಿ. ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವಿನ ಅನುಪಾತವನ್ನು ನಿರ್ಧರಿಸಿ, ಅದರಂತೆಯೇ ನೇಮಕಾತಿ ಮಾಡಲಿ. ಶಿಕ್ಷಣ ವ್ಯವಸ್ಥೆ ಇರುವುದು ಸುಸ್ಥಿರ ಸಮಾಜಕ್ಕಾಗಿ. ಇಲ್ಲಿಯೂ ತರತಮ ನೀತಿ ತರದಂತೆ ಸರ್ಕಾರ ವರ್ತಿಸಲಿ.

**■ ರಶ್ಮಿ ಎಸ್**